


ಪ್ಯಾಸ್ಟರ್ ಟೋನಿ ಅಲಾಮೊ ಅಲಾಮೊ ಕ್ರೈಸ್ತಮತೀಯ ರಾಷ್ಟ್ರ ಸಂಪುಟ 22200

# ಭಯಭೀತರು ಮತ್ತು ನಂಬಿಕೆಯಿಲ್ಲದವರು

**ಟೋನಿ ಅಲಾಮೊ ಅವರಿಂದ**

ಪ್ರಕಟನೆ 21:8 ಹೀಗೆಂದು ಹೇಳುತ್ತದೆ, "ಆದರೆ ಭಯಭೀತರು, ನಂಬಿಕೆಯಿಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟಗಾರರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ [ಮತ್ತು ಕೊನೆಯ] ಮರಣ." ಸಮಸ್ಯೆ ಏನೆಂದರೆ ಬೆಂಕಿಯ ಕೆರೆ ಎಂದರೆ ಶಾಶ್ವತ ಸಾವು, ಅದು ಎಂದೂ ಕೊನೆಗೊಳ್ಳುವುದಿಲ್ಲ.[1]



ಪ್ಯಾಸ್ಟರ್ ಟೋನಿ ಮತ್ತು ಪ್ಯಾಸ್ಟರ್ ಸೂಸನ್ ಅಲಾಮೊ1972 ರಲ್ಲಿ ತೆಗೆದ ಚಿತ್ರ

ಬೈಬಲ್ಲಿನ ಈ ವೇದವಾಕ್ಯದಲ್ಲಿ, ಪಟ್ಟಿ ಮಾಡಲಾದ ಎಲ್ಲಾ ಪಾಪಗಳಿಗಿಂತಲೂ ಮೊದಲು, ನಿಮ್ಮ ಆತ್ಮವನ್ನು ಬೆಂಕಿಯ ಕೆರೆಯಲ್ಲಿ ದೂಡಲ್ಪಡಲು ಕಾರಣವಾದ ಭಯಭೀತರು ಮತ್ತು ನಂಬಿಕೆಯಿಲ್ಲದವರು ಪಟ್ಟಿಯ ಆರಂಭದಲ್ಲಿವೆ. ಇವು ಪವಿತ್ರಾತ್ಮದ ನಿಂದನೆಯನ್ನು ಹೊರತುಪಡಿಸಿ (ಇದು ಪವಿತ್ರಾತ್ಮನನ್ನು ನಿಂದಿಸುವುದಕ್ಕೆ ಸಮನಾಗಿರುತ್ತದೆ), ಎಲ್ಲ ಪಾಪಗಳಲ್ಲಿ ಅತ್ಯಂತ ಘೋರವಾದ ಪಾಪಗಳಾಗಲು ಕಾರಣವೇನೆಂದರೆ ಪ್ರಭುವಿಗೆ ಭಯಪಡದೆ ಸೈತಾನನಿಗೆ ಭಯಪಡುವ ಒಬ್ಬ ವ್ಯಕ್ತಿ ತನ್ನನ್ನು ಕಾಪಾಡಿಕೊಳ್ಳಲು ನಿಮಗೆ ದ್ರೋಹ ಮಾಡುವನು. ಅಲ್ಲದೆ, ಇದು ಯೂದ ಇಸ್ಕರಿಯೋತ ಯೂದ ಪ್ರಭುವಿಗೆ ಬಗೆದ ದ್ರೋಹಕ್ಕೆ ಸಮನಾಗಿದೆ, ಏಕೆಂದರೆ ರಕ್ಷಿತರಾದ ನಾವು, ಕ್ರಿಸ್ತನ ದೇಹವಾಗಿದ್ದೇವೆ ಮತ್ತು ಆತ ಈ ಲೋಕದಲ್ಲಿ ನಮ್ಮೊಳಗೆ ವಾಸಿಸುವುದನ್ನು ಮುಂದುವರಿಸಿದ್ದಾರೆ.[2] ಆದ್ದರಿಂದ ನಾವು ಕ್ರಿಸ್ತರಾಗಿದ್ದೇವೆ.

ಮತ್ತಾಯ 24:9-10ರಲ್ಲಿ ಯೇಸು, ಕೊನೆಯ ದಿನಗಳ ಬಗ್ಗೆ ಹೀಗೆಂದು ಹೇಳಿದರು, "ಆಗ ನಿಮ್ಮನ್ನು(-ನಿಜವಾದ ಕ್ರೈಸ್ತರನ್ನು) ಉಪದ್ರವಕ್ಕೆ ಒಪ್ಪಿಸಿ ಕೊಲ್ಲುವರು; ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲಾ ಜನಾಂಗಗಳವರು ಹಗೆ ಮಾಡುವರು. ಆಗ ಅನೇಕರು ಅಪರಾಧ ಎಸಗುವವರು ಮತ್ತು ಒಬ್ಬರನ್ನೊಬ್ಬರು ಹಿಡಿದುಕೊಡುವವರು ಹಾಗೂ ಪರಸ್ಪರ ಹಗೆ ಮಾಡುವರು."

ಪವಿತ್ರಾತ್ಮ ಮತ್ತು ಯೇಸುವಿನ ರೂಪವಾದ ಜೀವನದಿಯಲ್ಲಿ ನೀವು ಬದುಕುತ್ತಿದ್ದರೆ, ನಿಮ್ಮ ಆತ್ಮವು ಬೆಂಕಿಯ ಕೆರೆಗೆ ದೂಡಲ್ಪಡುವ ಮಟ್ಟಿಗೆ ನೀವು ಭಯಭೀತರಾಗುವುದು ಅಸಾಧ್ಯ.[3] ಏಕೆಂದರೆ "ದೇವರು ನಮಗೆ ಕೊಟ್ಟಿರುವ ಆತ್ಮವು ಬಲ, ಪ್ರೀತಿ, ಮತ್ತು ಸ್ವಸ್ಥ ಮನಸ್ಸಿನದೇ ಹೊರತು ಭಯಭೀತಿಯ (ಹೇಡಿತನದ) ಆತ್ಮವಲ್ಲ. ಆದ್ದರಿಂದ ನೀವು ನಮ್ಮ ಕರ್ತನನ್ನು ಕುರಿತು ಹೇಳುವ ಸಾಕ್ಷಿಯ ವಿಷಯದಲ್ಲಾಗಲಿ ಆತನ ಸೆರೆಯವನಾದ ನನ್ನ ವಿಷಯದಲ್ಲಾಗಲಿ ನಾಚಿಕೆಪಡಬೇಡಿ: ಆದರೆ ದೇವರ ಬಲವನ್ನು ಆಶ್ರಯಿಸಿ ನನ್ನೊಂದಿಗೆ ಸುವಾರ್ತೆಗೋಸ್ಕರ ಶ್ರಮೆಯನ್ನನುಭವಿಸಿ. ಆತನು ನಮ್ಮ ಕೃತ್ಯಗಳನ್ನು ನೋಡಿದ್ದರಿಂದಲ್ಲ, ಅನಾದಿಕಾಲದಲ್ಲಿ ಯೇಸು ಕ್ರಿಸ್ತರಲ್ಲಿ ನಮಗೆ ನೀಡಿದ ತನ್ನ ಸಂಕಲ್ಪ [ತನ್ನ ಕೆಲಸಗಳಿಗಾಗಿ] ಮತ್ತು ಬಲಕ್ಕನುಗುಣವಾಗಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವದಕ್ಕೆ ಕರೆದನು. ಆದರೆ ವಿಶ್ವದ ಆರಂಭಕ್ಕೂ ಪೂರ್ವದಲ್ಲಿಯೇ ನಮ್ಮ ರಕ್ಷಕನಾದ ಕ್ರಿಸ್ತ ಯೇಸುವಿನ ಪ್ರತ್ಯಕ್ಷತೆಯ ಮೂಲಕ ಅದನ್ನು ಪ್ರಕಾಶಪಡಿಸಿದ್ದಾನೆ. ಈತನು ಮರಣವನ್ನು ನಾಶಮಾಡಿ ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು. (2 ತಿಮೊಥೆಯನಿಗೆ 1:7-10).

ಪ್ರಭುವಿಗೆ ಭಯಪಡುವುದು ಅಗತ್ಯ, ಏಕೆಂದರೆ ಪ್ರಭುವಿನ ಭಯವೇ ತಿಳಿವಳಿಕೆಯ ಆರಂಭ; ಪ್ರಭುವಿನ ಭಯವೇ ಜ್ಞಾನದ ಆರಂಭ (ಜ್ಞಾನೋಕ್ತಿಗಳು 1:7); ಮತ್ತು ಪ್ರಭುವಿನ ಭಯವೇ ವಿವೇಕದ ಆರಂಭ (ಜ್ಞಾನೋಕ್ತಿಗಳು 9:10).[4] ದೇವರಿಗೆ ಭಯಪಡುವುದು ವಿವೇಕ ಮತ್ತು ಆತನ ಆಜ್ಞೆಗಳನ್ನು ಪಾಲಿಸುವುದು ವಿವೇಕ.[5] ಪ್ರಸಂಗಿ 12:11-14 ಹೀಗೆಂದು ಹೇಳುತ್ತದೆ, "ಜ್ಞಾನಿಗಳ ಮಾತುಗಳು ಮುಳ್ಳುಗೋಲುಗಳು [ನಮ್ಮನ್ನು ಮುನ್ನಡೆಸಲು ಚೂಪಾದ ವಸ್ತುಗಳು]; ಸಂಗ್ರಹವಾಕ್ಯಗಳು [ದೇವರ ಪದ] ಬಿಗಿಯಾಗಿ ಬಡಿದ ಮೊಳೆಗಳು; ಒಬ್ಬನೇ ಕರ್ತನಿಂದ ['ಯೆಹೋವನು ನನಗೆ ಕುರುಬನು', ಅಂದರೆ ನನ್ನ ಮಾರ್ಗದರ್ಶಿಯಾದ ಕ್ರಿಸ್ತನು (ಕೀರ್ತನೆಗಳು 23:1)] ಬಂದಿವೆ. ಕಂದಾ, ಇವಲ್ಲದೆ ಉಳಿದವುಗಳಲ್ಲಿಯೂ ಎಚ್ಚರದಿಂದಿರು; ಬಹುಗ್ರಂಥಗಳ ರಚನೆಗೆ ಮಿತಿಯಿಲ್ಲ; ಅತಿ ವ್ಯಾಸಂಗವು ದೇಹಕ್ಕೆ ಆಯಾಸ. ವಿಷಯವು ತೀರಿತು; ಎಲ್ಲವೂ ಕೇಳಿ ಮುಗಿಯಿತು; ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಕೊಳ್ಳು; ಮನುಷ್ಯರೆಲ್ಲರಿಗೂ ಇದು ಅನ್ವಯಿಸುವುದು [ಸಂಪೂರ್ಣ ಕರ್ತವ್ಯವು ಇದೇ]. ಒಳ್ಳೆಯದಾಗಲಿ ಕೆಟ್ಟದ್ದಾಗಲಿ ಸಕಲ ರಹಸ್ಯ ಸಂಗತಿಗಳನ್ನು ವಿಮರ್ಶಿಸುವ ನ್ಯಾಯವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನು ಗುರಿಮಾಡುವನು. ಆದರೆ ಸೈತಾನನಿಗೆ, ಯಾವುದೇ ದುಷ್ಟತನಕ್ಕೆ ಭಯಪಡುವುದು ಅತ್ಯಂತ ದೊಡ್ಡ ಪಾಪ, ಅದು ಪಾಪಗಳ ಪಟ್ಟಿಯಲ್ಲಿ ಆರಂಭದಲ್ಲಿದೆ.[6] "ನಾನು ಸಾವಿನ ನೆರಳಿರುವ ಕಣಿವೆಯಲ್ಲಿ ನಡೆಯುವಾಗ ನೀನು [ಕರ್ತನು] ಹತ್ತಿರವಿರುವುದರಿಂದ ಕೇಡಿಗೆ ಹೆದರೆನು;[7] ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಸಾಂತ್ವನ ಕೊಡುತ್ತವೆ [ಅಂದರೆ ನಿನ್ನ

*(ಪುಟ 2ರಲ್ಲಿ ಮುಂದುವರಿದಿದೆ)*

**1** ಮಾರ್ಕ 9:43-48, ಲೂಕ 3:16-17, 16:19-26, ಯೂದನು 6-7, ಪ್ರಕಟನೆ 14:9-11, 19:20, 20:10-15 **2** ಯೋಹಾನನು 14:8-19, 17:11, 21-26, ರೋಮಾಪುರದವರಿಗೆ 12:4-5, 1 ಕೊರಿಂಥದವರಿಗೆ 3:16-17, 6:15-20, 10:16-17, 12:12-14, 27, 2 ಕೊರಿಂಥದವರಿಗೆ 4:5-14, 5:17-21, ಗಲಾತ್ಯದವರಿಗೆ 3:25-28, ಎಫೆಸದವರಿಗೆ1:4-6, 2:10-22, 4:4-6, ಇಬ್ರಿಯರಿಗೆ 2:11, ಪ್ರಕಟನೆ 3:21 **3** ಕೀರ್ತನೆಗಳು 1:1-4, ಯೆಶಾಯ 44:1-4, 55:1-3, ಯೆರೆಮೀಯ 2:13, 17:7-8, 13, ಯೆಹೆಜ್ಕೇಲನು 47:1-12, ಜೆಕರ್ಯ 14:8, ಯೊಹಾನನು 4:7-14, 6:35-40, 53-58, 7:37-39, 14:6, ಅಪೊಸ್ತಲರ ಕೃತ್ಯಗಳು 1:8, 4:31, ಪ್ರಕಟನೆ 7:17, 21:6, 22:1-5 **4** ಯೋಬನು 28:28, ಕೀರ್ತನೆಗಳು 111:10, 112:1, ಜ್ಞಾನೋಕ್ತಿಗಳು 2:1-12, 3:7, 9:10-12, 13:13, 14:2, 26-27, 15:33, ಪ್ರಸಂಗಿ 12:13-14 **5** ವಿಮೋಚನಕಾಂಡ 20:20, ಧರ್ಮೋಪದೇಶಕಾಂಡ 4:1-10, 5:29, 32-33, 6:1-2, 24, 10:12, 20, 13:4, ಕೀರ್ತನೆಗಳು 25:12-14, 103:13, 17, ಕೀರ್ತನೆಗಳು 112:1-3, 115:11, 13, ಜ್ಞಾನೋಕ್ತಿಗಳು 1:23-33, 3:13-26, 16:6, 19:23, ಪ್ರಸಂಗಿ 8:12-13, ಯೆಶಾಯ 8:13, 33:6, 66:2, ಯೆರೆಮೀಯ 2:19, 32:39-40, ಮಲಾಕಿಯ 3:16-18, 4:1-3, ಮತ್ತಾಯ 10:28, 1 ಪೇತ್ರನು 1:17 **6** ಕೀರ್ತನೆಗಳು 118:4-17, ಜ್ಞಾನೋಕ್ತಿಗಳು 29:25, ಯೆಶಾಯ 51:12-13, ಮತ್ತಾಯ 10:28, ಫಿಲಿಪ್ಪಿಯವರಿಗೆ 1:27-29, ಇಬ್ರಿಯರಿಗೆ 10:38-39, 13:5-6, ಪ್ರಕಟನೆ 21:8 **7** 1 ಸಮುವೇಲನು 17:37, ಯೋಬನು 13:15, ಯೆಶಾಯ 26:3-4, ದಾನಿಯೇಲನು 3:16-18, ಮತ್ತಾಯ 10:16-31

# ಭಯಭೀತರು ಮತ್ತು ನಂಬಿಕೆಯಿಲ್ಲದವರು

*(ಪುಟ 1 ರಿಂದ ಮುಂದುವರಿದಿದೆ)*

ದಂಡನೆ, ಏಕೆಂದರೆ ನಾನು ತಪ್ಪು ಮಾಡಿದಾಗ ಅದು ನನಗೆ ಹೇಳುತ್ತದೆ ಮತ್ತು ನರಕದಿಂದ ಮತ್ತು ಬೆಂಕಿಯ ಕೆರೆಯಿಂದ ದೂರವಿರಲು ನನಗೆ ಮಾರ್ಗದರ್ಶನ ನೀಡುತ್ತದೆ;[8] ನನ್ನನ್ನು ದುಷ್ಟ ಪ್ರಲೋಭನೆಯಿಂದ ದೂರ ಕರೆದೊಯ್ಯುವ ನಿನ್ನ ಕೋಲು ನನ್ನ ಮಾರ್ಗದರ್ಶಿ.]" [ಕೀರ್ತನೆಗಳು 23:4]

ಪಾಪಗಳ ಪಟ್ಟಿಯಲ್ಲಿ ಆರಂಭದಲ್ಲಿರುವ, ಕೇವಲ ಭಯಭೀತಿಯುಳ್ಳವರಾಗುವುದಕ್ಕಾಗಿ ಮತ್ತು ನಂಬಿಕೆಯಿಲ್ಲದವರಾಗಿರುವದಕ್ಕಾಗಿ ದೇವರು ಯಾರನ್ನಾದರೂ ಬೆಂಕಿಯ ಕೆರೆಗೆ ಏಕೆ ಕಳುಹಿಸುವರು? ದೇವರಿಗೆ ಭಯಪಡದೆ ಸೈತಾನನಿಗೆ ಭಯಪಡುವ ವ್ಯಕ್ತಿಯು ಕಷ್ಟದಲ್ಲಿದ್ದಾಗ ನಿಮಗೆ ದ್ರೋಹ ಮಾಡುತ್ತಾನೆ, ಮತ್ತು, ಇದಕ್ಕೂ ಮಿಗಿಲಾಗಿ, ದೇವರ ದೇಹಕ್ಕೆ, ಭೂಮಿಯ ಮೇಲೆ ಆತನ ಕೆಲಸ ಮಾಡುತ್ತಿರುವ ಆತನ ಚರ್ಚಿಗೆ ವಂಚನೆ ಮಾಡುತ್ತಾನೆ. ಕಾಲದ ಅಂತ್ಯದ ಬಗೆಗೆ ಯೇಸು ಹೇಳಿದವುಗಳಲ್ಲಿ ಇದು ಒಂದು ಸೂಚನೆ.

"ಇವೆಲ್ಲಾ ದುಃಖದ ಪ್ರಾರಂಭ. ಆಗ ನಿಮ್ಮನ್ನು ಉಪದ್ರವಕ್ಕೆ ಒಪ್ಪಿಸಿ ಕೊಲ್ಲುವರು; ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲಾ ಜನಾಂಗಗಳವರು ಹಗೆ ಮಾಡುವರು. ಆಗ ಅನೇಕರು ಅಪರಾಧ ಎಸಗಿ ಒಬ್ಬರನ್ನೊಬ್ಬರು ಹಿಡಿದುಕೊಡುವರು; ಒಬ್ಬರ ಮೇಲೊಬ್ಬರು ದ್ವೇಷ ಮಾಡುವರು. ಬಹುಮಂದಿ ಸುಳ್ಳು ಪ್ರವಾದಿಗಳು [ಸುಳ್ಳುಗಾರರು] ಸಹ ಎದ್ದು ಅನೇಕರನ್ನು ಮೋಸಗೊಳಿಸುವರು. ಇದಲ್ಲದೆ ಅಧರ್ಮವು [ದುಷ್ಟತನ, ಪಾಪ] ಹೆಚ್ಚಾಗುವುದರಿಂದ ಬಹುಜನರ ಪ್ರೀತಿಯು ತಣ್ಣಗಾಗಿಹೋಗುವುದು [ದೇವರ ಆಜ್ಞೆಗಳ ಪಾಲನೆಯು ನಡೆಯುವುದಿಲ್ಲ]. ಆದರೆ ಕಡೇವರೆಗೂ ತಾಳುವವನು [ಪವಿತ್ರಾತ್ಮನಲ್ಲಿ ಮುಂದುವರಿಯುವವನು] ರಕ್ಷಣೆಹೊಂದುವನು. ಇದಲ್ಲದೆ ಪರಲೋಕರಾಜ್ಯದ ಈ ಸುವಾರ್ತೆಯನ್ನು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ ಅಂತ್ಯವು ಬರುವದು. ಆದ್ದರಿಂದ ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳು ಮಾಡುವ ಅಸಹ್ಯ ವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವುದನ್ನು ನೀವು ಕಾಣುವಿರಿ (ಮತ್ತಾಯ 24:8-15).

ಇದು ಭೂಮಿಯ ನೈತಿಕ, ಸಭ್ಯ, ದೈವಭಕ್ತಿಯುಳ್ಳ ಸರ್ಕಾರ ಮತ್ತು ಅದರ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಉದ್ದೇಶಪೂರ್ವಕ ನಾಶ ಮಾತ್ರವಲ್ಲದೆ ದೇವರ ಆಜ್ಞೆಗಳ ಸ್ಪಷ್ಟ ನಿರ್ಲಕ್ಷ್ಯ. ಇದು ನಾಲ್ಕನೆಯ ಮತ್ತು ಕೊನೆಯ ಜಾತ್ಯಾತೀತ ರಾಜ್ಯ, ಮತ್ತು ಇದು ಸಂಪೂರ್ಣವಾಗಿ ಪೈಶಾಚಿಕವಾಗಿದೆ.[9] ಏಕೆಂದರೆ ಕ್ರಿಸ್ತ-ವಿರೋಧಿ ವಿಶ್ವ ಸರ್ಕಾರ ಮತ್ತು ರಾಜ್ಯದ ಪೈಶಾಚಿಕ ಸಿದ್ಧಾಂತವನ್ನು ಜಗತ್ತಿನ ನಾಗರಿಕರಿಗೆ ವ್ಯವಸ್ಥಿತವಾಗಿ ಬೋಧಿಸಲಾಗುತ್ತಿದೆ. ದಾನಿಯೇಲನ ಏಳನೆಯ ಅಧ್ಯಾಯವು ಅಸಹ್ಯವಾದ ಈ ಸರ್ಕಾರದ ಬಗ್ಗೆ ನಮಗೆ ಹೇಳುತ್ತದೆ. ನಮ್ಮನ್ನು ಈಗ ಆಳುತ್ತಿರುವ ಈ ಸರ್ಕಾರವು ಆ ಅಸಹ್ಯವಾದ ಸರ್ಕಾರವಾಗಿದೆ ಎಂದು ದಾನಿಯೇಲನು ನಮಗೆ ತೋರಿಸುತ್ತಾರೆ, ಮತ್ತು "ಅಸಹ್ಯ" ಎಂದರೆ ಹೇಸಿಕೆಯುಂಟುಮಾಡುವಂಥದ್ದು, ದುಷ್ಟವಾದದ್ದು. ಈ ಸರ್ಕಾರವು ದೇವರ ಪದವನ್ನು ಮತ್ತು ದೇವರನ್ನೆ ದ್ವೇಷಿಸುತ್ತದೆ. ಇದು ದೇವರ ಜನರನ್ನು ಕೂಡ ದ್ವೇಷಿಸುತ್ತದೆ ಮತ್ತು ಸೈತಾನನ ಸರ್ಕಾರವಾಗಿದೆ.[10] ದಾನಿಯೇಲನು ಈ ಸರ್ಕಾರವನ್ನು ಮತ್ತು ಇದನ್ನು ಅನುಸರಿಸುವ ಜನರನ್ನು ಒಂದು ದುಷ್ಟ ರಾಕ್ಷಸ ಎಂದು ವರ್ಣಿಸುತ್ತಾರೆ.

ದಾನಿಯೇಲನು 7:7ನಲ್ಲಿ, ದಾನಿಯೇಲನು ಹೀಗೆಂದು ಹೇಳುತ್ತಾರೆ, "ನಾನು ರಾತ್ರಿ ಕಂಡ ಕನಸಿನಲ್ಲಿ ಸ್ವಲ್ಪ ಹೊತ್ತಿನ ಮೇಲೆ ಆಹಾ, ನಾಲ್ಕನೆಯ ಮೃಗವು ಕಾಣಿಸಿತು [ಕೊನೆಯ ಜಾತ್ಯಾತೀತ ರಾಜ್ಯ]; ಅದು ಭಯಂಕರ, ಹೆದರಿಸುವಂಥದ್ದು [ಅದು ಇಂದಿನ ಪೈಶಾಚಿಕ ಒಂದು-ವಿಶ್ವ ಸರ್ಕಾರ], ಅಧಿಕಬಲವುಳ್ಳದ್ದು; ಅದಕ್ಕೆ ಕಬ್ಬಿಣದ ದೊಡ್ಡ ಹಲ್ಲುಗಳಿದ್ದವು [ಒಳ್ಳೆಯ ಜನರನ್ನು, ಅವರ ವ್ಯಾಪಾರಗಳನ್ನು, ಮತ್ತು ಅವರ ಆರ್ಥಿಕತೆಯನ್ನು ಚೂರುಚೂರಾಗಿ ಹರಿದು ಹಾಕಲು]; ಅದು ನುಂಗುತ್ತಾ ಚೂರುಚೂರು ಮಾಡುತ್ತಾ ಮಿಕ್ಕದ್ದನ್ನು ಕಾಲುಗಳಿಂದ ತುಳಿಯುತ್ತಾ ಇತ್ತು [ಬೇರೆ ಮಾತಿನಲ್ಲಿ ಹೇಳುವುದಾದರೆ, ಪ್ರತಿ ನಿಮಿಷ ಅದು ಭೂಮಿಯ ಮೇಲೆ ಪ್ರತಿಯೊಂದು ಒಳ್ಳೆಯ ವಸ್ತುವನ್ನು ನಾಶ ಮಾಡುತ್ತಿದೆ]; ಅದು ಮುಂಚಿನ ಎಲ್ಲಾ ಮೃಗಗಳಿಗಿಂತ ವಿಲಕ್ಷಣವಾಗಿತ್ತು [ಜಾತ್ಯಾತೀತ ರಾಜ್ಯಗಳು];" ಏಕೆಂದರೆ ಅದು ಒಂದು-ವಿಶ್ವ ರಾಜ್ಯ.

ಯೆಶಾಯ ಪುಸ್ತಕದಲ್ಲಿ, ಅಧ್ಯಾಯ 14 ಹೇಳುವುದೇನೆಂದರೆ, "ಜನಗಳನ್ನು ಕೋಪೋದ್ರೇಕದಿಂದ ಎಡೆಬಿಡದೆ ಹೊಡೆದು [ಸೈತಾನನು ಇಂದು ಮಾಡುತ್ತಿರುವಂತೆ] ಜನಾಂಗಗಳನ್ನು ಸಿಟ್ಟಿನಿಂದ ತಡೆಯಿಲ್ಲದೆ ಹಿಂಸಿಸಿ ಆಳುತ್ತಿದ್ದ ದುಷ್ಟರ ಕೋಲನ್ನೂ ರಾಜರ ದಂಡವನ್ನೂ ಯೆಹೋವನು ಮುರಿದುಬಿಟ್ಟನು [ಏಕೆಂದರೆ ದೇವರು ತಡೆದಾಗ, ಆತನನ್ನು ತಡೆಯಲು ಯಾರಿಗೆ ಸಾಧ್ಯ?]" (ಯೆಶಾಯ 14:6).

ವಿಶ್ವವು ಶಾಂತಿಯಿಂದಿರುವಾಗ ಅವರು ಹೀಗೆನ್ನುತ್ತಾರೆ, "ಹೌದು, ತುರಾಯಿಮರಗಳೂ ಲೆಬನೋನಿನ ದೇವದಾರು ವೃಕ್ಷಗಳೂ ನೀನು ಬಿದ್ದುಕೊಂಡ ಮೇಲೆ ಕಡಿಯುವವನು ಯಾವನೂ ನಮ್ಮ ತಂಟೆಗೆ ಬಂದಿಲ್ಲವೆಂದು ನಿನ್ನ ವಿಷಯವಾಗಿ ಉಲ್ಲಾಸಗೊಳ್ಳುತ್ತವೆ. ಬರುತ್ತಿರುವ ನಿನ್ನನ್ನು [ಸೈತಾನ ಮತ್ತು ನಿನ್ನನ್ನು ಅನುಸರಿಸುವವರು] ಎದುರುಗೊಳ್ಳುವದಕ್ಕೆ ಕೆಳಗಡೆ ಪಾತಾಳವು ತಳಮಳಪಡುತ್ತದೆ; ನಿನಗೋಸ್ಕರ ಸತ್ತವರನ್ನು, ಅಂದರೆ ಭೂಲೋಕದಲ್ಲಿ ಮುಖಂಡರಾಗಿದ್ದವರೆಲ್ಲರನ್ನು ಎಚ್ಚರಗೊಳಿಸಿ ಜನಾಂಗಗಳ ಸಕಲ ರಾಜರನ್ನು ಅವರವರ ಆಸನಗಳಿಂದ ಎಬ್ಬಿಸುತ್ತದೆ. ಇವರೆಲ್ಲಾ ನಿನ್ನ ಕುರಿತು – ನೀನು [ಸೈತಾನ] ಸಹ ನಮ್ಮ ಹಾಗೆ ಬಲಹೀನನಾದೆಯಾ? ನಮಗೆ ಸರಿಸಮಾನನಾದೆಯಾ? ಎಂದು ಹೇಳುತ್ತಾರೆ. ನಿನ್ನ ವೈಭವವೂ ವೀಣಾನಾದವೂ ಪಾತಾಳಕ್ಕೆ ತಳ್ಳಲ್ಪಟ್ಟಿವೆ; ನಿನಗೆ ಹುಳಗಳೇ ಹಾಸಿಗೆ, ಕ್ರಿಮಿಗಳೇ ಹೊದಿಕೆ.

ಆಹಾ, ಲೂಸಿಫೆರನೇ, ಉದಯಪುತ್ರನೇ ಆಕಾಶದಿಂದ ಹೇಗೆ ಬಿದ್ದೆ! ಜನಾಂಗಗಳನ್ನು ಕೆಡವಿದ ನೀನು ಕಡಿಯಲ್ಪಟ್ಟು ನೆಲಕ್ಕೆ ಉರುಳಿದೆಯಲ್ಲಾ! ನೀನು ನಿನ್ನ ಮನಸ್ಸಿನಲ್ಲಿ – ನಾನು ಆಕಾಶಕ್ಕೆ ಹತ್ತಿ ಉತ್ತರದಿಕ್ಕಿನ ಕಟ್ಟಕಡೆಯಿರುವ ಸುರಗಣ ಪರ್ವತದಲ್ಲಿ ನನ್ನ ಸಿಂಹಾಸನವನ್ನು ದೇವರ ನಕ್ಷತ್ರಗಳಿಗಿಂತ ಮೇಲೆ ಏರಿಸಿ ಆಸೀನನಾಗುವೆನು; ಉನ್ನತ ಮೇಘಮಂಡಲದ ಮೇಲೆ ಏರಿ ಉನ್ನತೋನ್ನತನಿಗೆ ಸರಿಸಮಾನನಾಗುವೆನು ಅಂದುಕೊಂಡಿದ್ದೆಯಲ್ಲಾ [ಈಗಿರುವ ಸರ್ಕಾರವು ದೇವರಾಗಲು ಪ್ರಯತ್ನಿಸುತ್ತಿದೆ. ಅವರ ಮೂರ್ಖತನದಲ್ಲಿ, ಕಾಲವು ಶಾಶ್ವತವಾಗಿ ಮುನ್ನಡೆಯುತ್ತದೆ ಎಂದು ಅವರು ಅಂದುಕೊಂಡಿದ್ದಾರೆ. ಅವರು ಬಹಳ ಅಜ್ಞಾನಿಗಳು, ಏಕೆಂದರೆ ಇದು ಈಗ ಕಾಲದ ಅಂತ್ಯ ಎಂಬುದು ಅವರಿಗೆ ಅರ್ಥವಾಗುತ್ತಿರುವಂತೆ ತೋರುತ್ತಿಲ್ಲ.]! ಆದರೆ ನೀನು ಪಾತಾಳಕ್ಕೆ, ಅಧೋಲೋಕದ ಅಗಾಧಸ್ಥಳಗಳಿಗೆ, ತಳ್ಳಲ್ಪಡುತ್ತಿದ್ದೀ. ನಿನ್ನನ್ನು [ಸೈತಾನನನ್ನು] ಕಂಡವರು ದಿಟ್ಟಿಸಿ ನೋಡಿ ಯೋಚಿಸುತ್ತಾ – ಭೂಮಿಯನ್ನು ನಡುಗಿಸಿ ರಾಜ್ಯಗಳನ್ನು ಕದಲಿಸಿ ಪಟ್ಟಣಗಳನ್ನು ಕೆಡವಿ ಲೋಕಗಳನ್ನು ಕಾಡನ್ನಾಗಿ ಮಾಡಿ ಸೆರೆಹಿಡಿದವರನ್ನು ಮನೆಗೆ ಬಿಡದೆ ಇದ್ದವನು ಇವನೋ? ಅಂದುಕೊಳ್ಳುವರು. ಜನಾಂಗಗಳ ಎಲ್ಲಾ ಅರಸರೂ, ಹೌದು, ಸಕಲ ರಾಜರೂ ತಮ್ಮ ತಮ್ಮ ಮನೆಗಳಲ್ಲಿ ವೈಭವದೊಡನೆ ದೀರ್ಘನಿದ್ರೆಮಾಡುತ್ತಾರೆ. ನೀನಾದರೋ ನಿನ್ನ ಗೋರಿಗೆ ದೂರವಾಗಿ ಕೆಟ್ಟ ಮೊಳಕೆಯಂತೆ ಬಿಸಾಡಲ್ಪಟ್ಟಿದ್ದೀ; ನಿನ್ನ ಶವವು ತುಳಿತಕ್ಕೆ ಈಡಾಗಿದೆ, ಕತ್ತಿ ತಿವಿದು ಗುಂಡಿಯ ಕಲ್ಲುಗಳ ಪಾಲಾದ ಹತರೇ ಅದಕ್ಕೆ ಹೊದಿಕೆ" (ಯೆಶಾಯ 14:8-19)

ಬೈಬಲ್‌ಅನ್ನು ಓದುವುದರಿಂದ, ಏದೆನ್ ವನದಲ್ಲಿ ಹವ್ವ ಮಾಡಿದಂತೆ, ಪಿಶಾಚಿಗೆ ಭಯಪಟ್ಟು ಅಥವಾ ಅವನು ಹೇಳಿದ್ದನ್ನು ನಂಬುವುದರಲ್ಲಿ ಯಾವುದೇ ಪ್ರಯೋಜನವಿಲ್ಲ ಎಂದು ನೀವು ಕಾಣಬಹುದು.[11] ನಾವು ದೇವರ ಬದಲು ಸೈತಾನನಿಗೆ ಭಯಪಟ್ಟಾಗ, ನಾವು ಸೈತಾನನಿಗೆ ಭಯಪಡುವವರಲ್ಲಿ ಒಬ್ಬರಾಗುವೆವು ಮತ್ತು ದೇವರಲ್ಲಿ ನಂಬಿಕೆಯಿಲ್ಲದವರಲ್ಲಿ ಒಬ್ಬರಾಗುವೆವು ಎಂದು ನಾವು ನೋಡಬಹುದು, ಮತ್ತು ಇದರಿಂದಾಗಿ, ನಾವು ಶಾಶ್ವತತೆಯನ್ನು ಬೆಂಕಿಯ ಕೆರೆಯಲ್ಲಿ ಕಳೆಯುತ್ತೇವೆ. ಪುನಃ, "ದೇವರು ನಮಗೆ ಕೊಟ್ಟಿರುವ ಆತ್ಮವು ಬಲ, ಪ್ರೀತಿ ಮತ್ತು ಸ್ವಸ್ಥ ಮನಸ್ಸಿನ

**8** ಧರ್ಮೋಪದೇಶಕಾಂಡ 8:5-6, ಯೋಬನು 5:17, ಜ್ಞಾನೋಕ್ತಿಗಳು 3:11-12, 29:1, ಇಬ್ರಿಯರಿಗೆ 12:5-13, ಪ್ರಕಟನೆ 3:19
**9** ದಾನಿಯೇಲನು 2:29-45, 7:7-12, 17-27

**10** ದಾನಿಯೇಲನು 8:1-26, 2 ಥೆಸಲೋನಿಕದವರಿಗೆ 2:6-10, ಪ್ರಕಟನೆ 12:3, 9, 13:1-18, 14:9-11, 16:13-14, 17:1-15, 18:23-24, 19:19-21, 20:4 **11** ಆದಿಕಾಂಡ 2:16-17, 3:1-6, ಯೆಶಾಯ 14:9-17, ಯೊಹಾನನು 8:44, 10:10, 2 ಕೊರಿಂಥದವರಿಗೆ 11:13-15, ಎಫೆಸದವರಿಗೆ4:27, 1 ತಿಮೊಥೆಯನಿಗೆ 4:1-2, ಇಬ್ರಿಯರಿಗೆ 2:1-3, 3:12-14, 18-19, 1 ಪೇತ್ರನು 5:8-9, 2 ಪೇತ್ರನು 2:19-22, 1 ಯೊಹಾನನು 4:1-3, ಪ್ರಕಟನೆ 21:22-27

## ಕ್ಯಾಲಿಫೋರ್ನಿಯ

ಪ್ಯಾಸ್ಟರ್ ಟೋನಿ ಅವರಿಗೆ ನಮಸ್ಕಾರ.

ನಾನು ಹಾಂಗ್ ಕಾಂಗ್ ನವನು, ಕ್ಯಾಲಿಫೋರ್ನಿಯದಲ್ಲಿ ವಾಸಿಸುತ್ತಿದ್ದೇನೆ. ನಾನೊಬ್ಬ ನಾಸ್ತಿಕನಾಗಿದ್ದೆನು. ಅನೇಕ ತಿಂಗಳುಗಳ ಹಿಂದೆ, ಎಲ್ಲವೂ ದುಷ್ಟ ಒಂದು-ವಿಶ್ವ ಸರ್ಕಾರ ಮತ್ತು ಸೈತಾನನಿಗೆ ಸಂಬಂಧ ಹೊಂದಿದೆ ಎಂದು ನಾನು ಕಂಡುಕೊಂಡೆನು. ಸೈತಾನನಿದ್ದರೆ ದೇವರೂ ಇರುವರು ಎಂಬುದನ್ನು ನಾನು ಕಂಡುಕೊಂಡೆ, ಆದ್ದರಿಂದ ರಕ್ಷಣೆಯ ಹುಡುಕಾಟದಲ್ಲಿ ನಾನು ಚರ್ಚಿಗೆ ಹೋಗಲು ನಿರ್ಧರಿಸಿದೆನು. ನಾನು ಯಾವ ಚರ್ಚಿಗೆ ಹೋಗಬೇಕು ಎಂಬುದನ್ನು ತೋರಿಸಬೇಕೆಂದು ನನ್ನ ಹೆಂಡತಿ ಮತ್ತು ನಾನು ದೇವರಲ್ಲಿ ಪ್ರಾರ್ಥಿಸಿದೆವು, ಮತ್ತು ಮಾರನೆಯ ದಿನ, ನಿಮ್ಮ ಸಾಹಿತ್ಯ ನನ್ನ ವಿಂಡ್ ಷೀಲ್ಡ್ ಮೇಲಿತ್ತು. ಇದನ್ನು ದೃಢಪಡಿಸಲು ಇನ್ನೆರಡು ಸಲ ಪ್ರಾರ್ಥಿಸಿದ ನಂತರ, ಪ್ರತಿ ಬಾರಿ ಮುಂದಿನ ಎರಡು ವಾರಗಳೊಳಗೆ ನಿಮ್ಮ ಸಾಹಿತ್ಯದ ಮತ್ತೊಂದು ತುಣುಕು ನನ್ನ ಕಾರಿನ ಬದಿಯಲ್ಲಿ ಸಿಕ್ಕಿತು, ಆದ್ದರಿಂದ ಒಂದೂವರೆ ಗಂಟೆ ದೂರದಲ್ಲಿರುವ ನಿಮ್ಮ ಚರ್ಚಿಗೆ ಹೋಗಬೇಕೆಂಬುದು ದೇವರ ಇಚ್ಛೆಯಾಗಿತ್ತು ಎಂದು ನನಗೆ ತಿಳಿಯಿತು. ದೇವರ ಮಾರ್ಗದರ್ಶನದ ನಂತರ ನಾವು ಹಾಗೆಯೇ ಮಾಡುತ್ತಿದ್ದೇವೆ. ದೇವರಿಗೆ ಸ್ತೋತ್ರ ಮಾಡಿ ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ.

ಬಿ.ವೈ. ಕಾರ್ಸನ್, ಕ್ಯಾಲಿಫೋರ್ನಿಯ

ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ" (2 ತಿಮೊಥೆಯನಿಗೆ 1:7). ಮತ್ತು, ನಿಜವಾಗಲೂ ಪ್ರೀತಿ ಎಂದರೆ ದೇವರ ಆಜ್ಞೆಗಳನ್ನು ಪಾಲಿಸುವುದು.[12] ದಾನಿಯೇಲನು 7:7ನಲ್ಲಿ ಉಲ್ಲೇಖಿಸಲಾಗಿರುವ ಸೈತಾನನ ಭಯಂಕರ ನಾಲ್ಕನೇ ಮೃಗದ ರಾಜ್ಯವು ನಮ್ಮನ್ನು ಭಯಪಡುವಂತೆ ಮಾಡಲು ನಾವು ಅವಕಾಶ ಕೊಟ್ಟರೆ, ದೇವರ ರಾಜ್ಯವನ್ನು ಪ್ರವೇಶಿಸಲು ನಮಗೆ ಅವಕಾಶವಿರುತ್ತದೆಯೇ? ಪ್ರಕಟನೆ 21:8ರಲ್ಲಿ ಹೇಳಲಾಗಿರುವಂತೆ, ನಾವು ಬೆಂಕಿಯ ಕೆರೆಯಲ್ಲಿ ಶಾಶ್ವತವಾಗಿ ಇರುತ್ತೇವೆ.

ಪ್ರಕಟನೆ ಪುಸ್ತಕದ ಹನ್ನೊಂದನೇ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿರುವ ಈ ಭೂಮಂಡಲದ ದೇವರ ಮುಂದೆ ನಿಂತ ದೇವರ ಇಬ್ಬರು ಸಾಕ್ಷಿಗಳ ಜೊತೆ ನಾವು ಒಟ್ಟಿಗೆ ನಿಲ್ಲಬೇಕು.[13] ಭೂಮಂಡಲದ ದೇವರು ಅಂದರೆ ಸೈತಾನ ಮತ್ತು ಅವನ ಒಂದು-ವಿಶ್ವ ಸರ್ಕಾರ, ಹೊಸ ವಿಶ್ವ ಸಂಸ್ಥೆ, ಮತ್ತಾಯದ ಇಪ್ಪತ್ತನಾಲ್ಕನೇ ಅಧ್ಯಾಯದ ಶ್ಲೋಕ 15ರಲ್ಲಿ ಯೇಸುವು ಉಲ್ಲೇಖಿಸಿರುವ "ಹಾಳು ಮಾಡುವ ಅಸಹ್ಯ ವಸ್ತು"[14] ಎಂಬಲ್ಲಿ ಅವರು ಹೀಗೆ ಹೇಳುತ್ತಾರೆ, ಈ ಹಾಳು ಸರ್ಕಾರವು ತನ್ನ ದುಷ್ಟ ತಲೆಯನ್ನು ಎತ್ತುವುದನ್ನು, ನಂತರ "ಪವಿತ್ರಸ್ಥಾನದಲ್ಲಿ ನಿಲ್ಲುವುದನ್ನು" (ಪವಿತ್ರಾತ್ಮ, ದೇವರ ಪದ) ಅಂದರೆ ಅದರರ್ಥ, "ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಳ್ಳಿ, ನೀತಿಯೆಂಬ ಎದೆಕವಚವನ್ನು ಧರಿಸಿಕೊಳ್ಳಿ ಮತ್ತು ಸಮಾಧಾನದ ವಿಷಯವಾದ ಸುವಾರ್ತೆಯನ್ನು ತಿಳಿಸುವದರಲ್ಲಿ ಸಿದ್ಧವಾದ ಮನಸ್ಸೆಂಬ ಕೆರಗಳನ್ನು ಮೆಟ್ಟಿಕೊಂಡು ನಿಲ್ಲಿರಿ. ಮತ್ತು ಎಲ್ಲಕ್ಕಿಂತ ಮಿಗಿಲಾಗಿ, ನಂಬಿಕೆಯೆಂಬ ಗುರಾಣಿಯನ್ನು ಹಿಡುಕೊಳ್ಳಿರಿ; ಅದರಿಂದ ನೀವು ಕೆಡುಕನ ಅಗ್ನಿಬಾಣಗಳನ್ನೆಲ್ಲಾ ಆರಿಸುವದಕ್ಕೆ ಶಕ್ತರಾಗುವಿರಿ. ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ. ನೀವು ಪವಿತ್ರಾತ್ಮಪ್ರೇರಿತರಾಗಿ [ದೇವರ ಸಿಂಹಾಸನದಿಂದ ಸ್ಫುರಿಸುವ ಜೀವನದಿ] ಎಲ್ಲಾ ಸಮಯಗಳಲ್ಲಿ ಸಕಲ ವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆಮಾಡುತ್ತಾ ಎಚ್ಚರವಾಗಿರಿ" (ಎಫೆಸದವರಿಗೆ 6:14-18).

ತಮ್ಮನ್ನು ಕ್ರೈಸ್ತಮತೀಯರು ಎಂದು ಕರೆದುಕೊಳ್ಳುವ ಅನೇಕ ಜನರು "ಭಯಭೀತರು ಮತ್ತು ನಂಬಿಕೆಯಿಲ್ಲದವರು" ಎಂಬ ವರ್ಗದಲ್ಲಿದ್ದಾರೆ, ಮತ್ತು ಅವರು ಶಾಶ್ವತತೆಯನ್ನು ಬೆಂಕಿಯ ಕೆರೆಯಲ್ಲಿ ಕಳೆಯುತ್ತಾರೆ. ನಾಸ್ತಿಕತೆಯು ಗೌರವಾನ್ವಿತವಾಗುವಂತೆ ಮತ್ತು ಕ್ರೈಸ್ತಮತವನ್ನು ತಿರಸ್ಕರಿಸಬೇಕೆಂಬಂತೆ ಪಿಶಾಚಿಯು ಅದನ್ನು ತಿರುಗಿಸಿದ್ದಾನೆ. ಆದರೆ ನಾನು, ಪ್ರಭು ಯೇಸು ಕ್ರಿಸ್ತರ ಹೆಸರಿನಲ್ಲಿ, ಸೈತಾನನೆ, ನಿನಗೆ ಛೀಮಾರಿ ಹಾಕುತ್ತೇನೆ, ಏಕೆಂದರೆ ನೀನು ನನಗೆ ಒಂದು ಅಪರಾಧ. ನೀನು ಪ್ರಭುವನ್ನು ತಿರಸ್ಕರಿಸುತ್ತೀಯಾ, ಮತ್ತು ದೇವರು ಮತ್ತು ನಾನು ನಿನ್ನನ್ನು ತಿರಸ್ಕರಿಸುತ್ತೇವೆ.

ಕ್ರೈಸ್ತಮತೀಯರೇ, "ಆ ಮನೆಯೊಳಕ್ಕೆ ಹೋಗುವಾಗ ಸೌಜನ್ಯ ವ್ಯಕ್ತಪಡಿಸಿ. ಆ ಮನೆಯವರು ಯೋಗ್ಯರಾಗಿದ್ದರೆ ನಿಮ್ಮ ಶಾಂತಿಯು ಅವರಿಗೆ ಲಭಿಸಲಿ; ಅಯೋಗ್ಯರಾಗಿದ್ದರೆ ನಿಮ್ಮ ಶಾಂತಿಯು ನಿಮಗೆ ಹಿಂದಕ್ಕೆ ಬರಲಿ. ಯಾರಾದರೂ ನಿಮ್ಮನ್ನು ಸೇರಿಸಿಕೊಳ್ಳದೆಯೂ ನಿಮ್ಮ ವಾಕ್ಯಗಳನ್ನು ಕೇಳದೆಯೂ ಹೋದರೆ ನೀವು ಆ ಮನೆಯನ್ನಾಗಲಿ ಆ ಊರನ್ನಾಗಲಿ ಬಿಟ್ಟು ಹೊರಡುವಾಗ ನಿಮ್ಮ ಕಾಲಿಗೆ ಹತ್ತಿದ ಧೂಳನ್ನು ಝಾಡಿಸಿಬಿಡಿರಿ" (ಮತ್ತಾಯ 10:12-14).

ಮಾರ್ಕ 8:31-34ರಲ್ಲಿ, ಯೇಸು ತನ್ನ ಶಿಷ್ಯರಿಗೆ ಹೀಗೆಂದು ಬೋಧಿಸಲು ಆರಂಭಿಸಿದರು, "ಮನುಷ್ಯಕುಮಾರನು ಬಹು ಕಷ್ಟಗಳನ್ನನುಭವಿಸಿ ಹಿರಿಯರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ನಿರಾಕೃತನಾಗಿ ಕೊಲ್ಲಲ್ಪಟ್ಟು ಮೂರು ದಿನದ ಮೇಲೆ ಜೀವಿತನಾಗಿ ಎದ್ದು ಬರಬೇಕಾಗಿದೆ ಎಂದು ಉಪದೇಶಮಾಡುವದಕ್ಕೆ ಪ್ರಾರಂಭ ಮಾಡಿದನು. ಆತನು ಈ ಮಾತನ್ನು ಬಹಿರಂಗವಾಗಿಯೇ ಹೇಳಿದನು, ಏನನ್ನೂ ರಹಸ್ಯವಾಗಿಡಲಿಲ್ಲ. ಆಗ ಪೇತ್ರನು ಆತನನ್ನು ಗದರಿಸುವದಕ್ಕೆ ಪ್ರಾರಂಭಿಸಲು ಆತನು [ಯೇಸು] ಹಿಂತಿರುಗಿಕೊಂಡು ತನ್ನ ಶಿಷ್ಯರನ್ನು ನೋಡಿ ಪೇತ್ರನಿಗೆ – ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ, ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ ಎಂದು ಗದರಿಸಿ ಹೇಳಿದನು. ಆ ಮೇಲೆ ಆತನು ತನ್ನ ಶಿಷ್ಯರ ಜೊತೆಗೆ ಜನರ ಗುಂಪನ್ನೂ ಹತ್ತಿರ ಕರೆದು ಅವರಿಗೆ ಹೇಳಿದ್ದೇನಂದರೆ – ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ." "ನಿಮ್ಮ ಹಿಂದೆ ಬರುವುದೇ, ಯೇಸು? ಅಂದರೆ ನಾವು ಹಿರಿಯರಿಂದ, ಮಹಾಯಾಜಕರಿಂದ, ಮತ್ತು ಶಾಸ್ತ್ರಿಗಳಿಂದ ನಿರಾಕರಿಸಲ್ಪಡಬೇಕೆ? ಮತ್ತು ನಾವು ಕೊಲ್ಲಲ್ಪಡಬೇಕಾಗಬಹುದೆ, ಯೇಸು, ಮತ್ತು ನೀವು ಮಾಡಿದಂತೆ, ನಾವೂ ಕೂಡ ನಮ್ಮ ಶಿಲುಬೆಯನ್ನು ಹೊತ್ತುಕೊಂಡು ಪ್ರತಿದಿನವೂ ಸಾಯಬೇಕೆ, ಯೇಸು? ಆದರೆ ಯೇಸು, ನಾವು ಭಯಭೀತರು ಮತ್ತು ನಂಬಿಕೆಯಿಲ್ಲದವರಾಗಿದ್ದರೆ? ನಮ್ಮನ್ನು ನಿಜವಾಗಿಯೂ ಬೆಂಕಿಯ ಕೆರೆಗೆ ದೂಡಲ್ಪಟ್ಟು ಶಾಶ್ವತವಾಗಿ ಅಲ್ಲಿಯೆ ಇರಬೇಕಾಗುವುದೆ?" ಬೈಬಲ್ ಸುಳ್ಳಾಡುವುದಿಲ್ಲ ಮತ್ತು ದೇವರು ಸುಳ್ಳಾಡುವುದು ಅಸಾಧ್ಯ (ಇಬ್ರಿಯರಿಗೆ 6:18). ಯೇಸುವೇ ಸತ್ಯ – "ಮಾರ್ಗವೂ, ಸತ್ಯವೂ, ಜೀವವೂ" ಆಗಿದ್ದಾರೆ (ಯೋಹಾನನು 14:6)

"ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿಯೂ ಸುವಾರ್ತೆಯ ನಿಮಿತ್ತವಾಗಿಯೂ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು. ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಆತ್ಮವನ್ನು ಕಳಕೊಂಡರೆ ಅವನಿಗೆ ಪ್ರಯೋಜನವೇನು? ಒಬ್ಬನು ತನ್ನ ಆತ್ಮಕ್ಕೆ ಏನು ಈಡು ಕೊಡಬಹುದು? ವ್ಯಭಿಚಾರಿಣಿಯಂತಿರುವ ಈ ಪಾಪಿಷ್ಠ ಸಂತತಿಯಲ್ಲಿ ಯಾವನು ನನಗೂ ನನ್ನ ಮಾತುಗಳಿಗೂ ನಾಚಿಕೊಳ್ಳುತ್ತಾನೋ ಅವನಿಗೆ ಮನುಷ್ಯಕುಮಾರನು, ತಾನು ತನ್ನ ತಂದೆಯ ಮಹಿಮೆಯೊಡನೆ ಪರಿಶುದ್ಧ ದೇವದೂತರ ಸಮೇತವಾಗಿ ಬರುವಾಗ ನಾಚಿಕೊಳ್ಳುವನು ಅಂದನು" (ಮಾರ್ಕ 8:35-38). "ಹೌದು, ಆದರೆ ಯೇಸು, ನಾವು ಭಯಪಟ್ಟರೆ, ನಾವು ನಿಜವಾಗಿಯೂ ಶಾಶ್ವತವಾಗಿ ಬೆಂಕಿಯ ಕೆರೆಗೆ ದೂಡಲ್ಪಡಬೇಕೆ?" ಆತನ ಪದಗಳು ಅದನ್ನೆ ಹೇಳುತ್ತವೆ, ಮತ್ತು ಯೇಸು ಸುಳ್ಳು ಹೇಳುವುದು ಅಸಾಧ್ಯ.[15]

ಆದುದರಿಂದಲೆ ಪ್ರವಾದಿಯಾದ ಯೆಹೆಜ್ಕೇಲನು ಮಾಡಿದಂತೆ (ಯೆಹೆಜ್ಕೇಲನು, ಅಧ್ಯಾಯ 47) ಆತ್ಮದಲ್ಲಿ ಉಳಿಯುವುದು ಹೇಗೆ, ಜೀವದ ನದಿಯಲ್ಲಿ ಉಳಿಯುವುದು ಹೇಗೆ, ಜೀವದ ಮರದಿಂದ ತಿನ್ನುವುದು ಹೇಗೆ, ಮತ್ತು ಜೀವದ ನದಿಯಲ್ಲಿ ಈಜುವುದು ಹೇಗೆ ಎಂಬುದರ ಬಗ್ಗೆ ನನ್ನ ಸೂಚನೆಗಳು ಅಷ್ಟು ಸ್ಪಷ್ಟವಾಗಿವೆ. ಒಮ್ಮೆ ನಿಮಗೆ ಜೀವದ ನದಿಯೊಂದಿಗೆ ಸಂತೃಪ್ತರಾದಾಗ (ಸಂಪೂರ್ಣ ತೃಪ್ತಿ), ಸ್ವಾಭಾವಿಕವಾದ, ದೇವ ಪ್ರವೃತ್ತಿಯಿಂದ ನಿಮಗೆ ಜೀವದ ನದಿಯಲ್ಲಿ, ಪವಿತ್ರಾತ್ಮನಲ್ಲಿ ಶಾಶ್ವತವಾಗಿ ಉಳಿಯಬೇಕೆಂದೆನಿಸುತ್ತದೆ. ನೀವು ಜೀವದ ಪವಿತ್ರಾತ್ಮನಲ್ಲಿದ್ದರೆ, ಜೀವದ ನದಿಯಲ್ಲಿದ್ದರೆ, ನೀವು ದುಷ್ಟತನಕ್ಕೆ ಭಯಪಡುವುದಿಲ್ಲ. ದೇವರು ನಿಮ್ಮೊಂದಿಗಿದ್ದಾರೆ ಮತ್ತು ನಿಮ್ಮೊಳಗಿದ್ದಾರೆ ಎಂದು ನಿಮಗೆ ತಿಳಿದಿರುತ್ತದೆ; ಮತ್ತು ನೀವು ಸಾವಿನ ನೆರಳಿನ ಕಣಿವೆಯಲ್ಲಿ ನಡೆದರೂ ನೀವು ದುಷ್ಟತನಕ್ಕೆ ಭಯಪಡುವುದಿಲ್ಲ, ಏಕೆಂದರೆ ದೇವರು ನಿಮ್ಮೊಂದಿಗಿದ್ದಾರೆ ಮತ್ತು ನಿರಂತರತೆಯಾದ್ಯಂತ ಎಂದೆಂದಿಗೂ ನಿಮ್ಮೊಂದಿಗಿರುತ್ತಾರೆ.[16] ನೀವು ಎಂದೂ ಭಯಭೀತರ ಮತ್ತು ನಂಬಿಕೆಯಿಲ್ಲದವರ ಗುಂಪಿನಲ್ಲಿರಬೇಕೆಂದು ಬಯಸುವುದಿಲ್ಲ, ಏಕೆಂದರೆ ಅವರು ಪಾಪಿಗಳ ಪಟ್ಟಿಯಲ್ಲಿ ಪ್ರಾರಂಭದಲ್ಲಿದ್ದಾರೆ. ಪುನಃ, "ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿಯೂ ಸುವಾರ್ತೆಯ ನಿಮಿತ್ತವಾಗಿಯೂ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು" (ಮಾರ್ಕ 8:35). ಜ್ಞಾನೋಕ್ತಿಗಳು 28:1ರಲ್ಲಿ ದೇವರ ಪದ ಹೀಗೆನ್ನುತ್ತದೆ, "ಹಿಂದಟ್ಟದಿದ್ದರೂ ದುಷ್ಟನು ಹೆದರಿ ಓಡುವನು; ಶಿಷ್ಟನು ಸಿಂಹದಂತೆ ಧೈರ್ಯದಿಂದಿರುವನು."

ನಾವು ಶಾಶ್ವತ ಬದುಕನ್ನು ಪಡೆಯಲು ಈ ಭೂಮಿಯ ಮೇಲೆ ಏನನ್ನೆಲ್ಲಾ ಅನುಭವಿಸಬೇಕೋ

*(ಪುಟ 4ರಲ್ಲಿ ಮುಂದುವರಿದಿದೆ)*

**12** ಮತ್ತಾಯ 25:31-46, ಯೊಹಾನನು 14:15, 21, 23-24, 15:10, 14, 1 ಯೊಹಾನನು 2:3-6, 3:22, 24, 5:2-3, 2 ಯೊಹಾನನು 1:6 **13** ಜೆಕರ್ಯ ಅಧ್ಯಾಯ 4, ಪ್ರಕಟನೆ 11:3-13

**14** ದಾನಿಯೇಲನು 8:9-14, 11:31, 12:11 **15** ಅರಣ್ಯಕಾಂಡ 23:19, 1 ಸಮುವೇಲನು 15:29, ಯೆಶಾಯ 40:8, ಮತ್ತಾಯ 24:35, ಇಬ್ರಿಯರಿಗೆ 6:17-18, 1 ಪೇತ್ರನು 2:22, 1 ಯೊಹಾನನು 3:5 **16** ಧರ್ಮೋಪದೇಶಕಾಂಡ 31:6, 8, 2 ಪೂರ್ವಕಾಲವೃತ್ತಾಂತ 15:2, ಎಜ್ರನು 8:22, ಕೀರ್ತನೆಗಳು 27:10, ಮತ್ತಾಯ 28:18-20, ಯೊಹಾನನು 16:33, ಇಬ್ರಿಯರಿಗೆ 13:5-6, 1 ಯೊಹಾನನು 4:4

## ಯುಗಾಂಡಾ

ಪ್ರೀತಿಯ ಪ್ಯಾಸ್ಟರ್,

ಮಾನವೀಯತೆಗೆ ಈ ದೊಡ್ಡ ಬೆದರಿಕೆಗಳ ಬಗ್ಗೆ ಇಂತಹ ಆಳವಾದ ಮತ್ತು ಮೂಲ ಸತ್ಯಗಳನ್ನು ಪ್ರಕಟಿಸಲು ನೀವು ತೆಗೆದುಕೊಂಡಿರುವ ಬಲವಾದ ಮತ್ತು ದೃಢವಾದ ಅಡಿಪಾಯಕ್ಕಾಗಿ ನಮ್ಮ ಮಿನಿಸ್ಟ್ರಿ ನಿಮ್ಮ ಮಿಷನ್‌ಅನ್ನು ಬಹಳ ಮೆಚ್ಚುತ್ತದೆ. ಬಹಳ ಜ್ಞಾನದಾಯಕವಾದ, ಸ್ಫೂರ್ತಿದಾಯಕವಾದ ಮತ್ತು ಆಧ್ಯಾತ್ಮಿಕವಾಗಿ ಉತ್ತಮಗೊಳಿಸುವಂಥ ನಿಮ್ಮ ಸಾಹಿತ್ಯವು ನನಗೆ ಸಿಕ್ಕಿತು. ಪ್ರೀತಿಯ ಮಿನಿಸ್ಟರ್, ಇಂತಹ ಸತ್ಯವನ್ನು ಪ್ರಕಟಿಸುವ ಮತ್ತು ಬಹಿರಂಗಪಡಿಸುವ ನಿಮ್ಮ ನಿಲುವಿಗಾಗಿ ನಿಮಗೆ ಧನ್ಯವಾದಗಳು. ಈ ಸತ್ಯದೊಂದಿಗೆ ವೈರಿಯ ಮೇಲೆ ದಾಳಿ ನಡೆಸಲು ನೀವು ನಮಗೂ ಬಹಳ ನೆರವಾಗಿದ್ದೀರಿ.

ಇಂತಹ ಸಾಹಿತ್ಯದೊಂದಿಗೆ ವಿಶ್ವದಾದ್ಯಂತ ದೇವರ ಲಕ್ಷಗಟ್ಟಲೆ ಜನರಿಗೆ ನೆರವಾಗಲು ಇಂತಹ ಶಕ್ತಿಯುಳ್ಳ ಮತ್ತು ಅದ್ಭುತ ಮಿನಿಸ್ಟ್ರಿಯೊಂದಿಗೆ ಮುಂದುವರಿಯಲು ಕರ್ತನು ನಿಮ್ಮನ್ನು ಹೆಚ್ಚು ಹೆಚ್ಚು ರಕ್ಷಿಸಲಿ ಮತ್ತು ನೆರವಾಗಲಿ. ಯುಗಾಂಡಾದಲ್ಲಿ, ಇಂಥ ಸತ್ಯದೊಂದಿಗೆ ಹಲವರನ್ನು ಸಶಕ್ತರನ್ನಾಗಿಸಲು ಪ್ರಾರಂಭಿಸಲು ನನ್ನ ತಂಡ ಸಿದ್ಧವಾಗಿದೆ. ಈ ದುಷ್ಟ ಸಂದೇಶವಾಹಕರಿಂದ ಅನೇಕರನ್ನು ರಕ್ಷಿಸಲು ಅವರನ್ನು ತಲುಪಲು ಸಾಧ್ಯವಾಗುವಂತೆ ನೀವು ನಮ್ಮನ್ನು ಇನ್ನೂ ಹೆಚ್ಚು ಇಂತಹ ಸಾಹಿತ್ಯದೊಂದಿಗೆ ಸಶಕ್ತಗೊಳಿಸಿ.

ಆತನ ದ್ರಾಕ್ಷಿ ತೋಟದಲ್ಲಿ,
ರೆವರೆಂಡ್ ಎಮ್.ಎನ್.ಎಮ್
ರಿವೈವಲ್ ಬೈಬಲ್ ಎಕ್ಸ್ ಪೊಸಿಟರ್ ಚರ್ಚಸ್
ಕಂಪಾಲಾ, ಯುಗಾಂಡಾ

# ಭಯಭೀತರು ಮತ್ತು ನಂಬಿಕೆಯಿಲ್ಲದವರು

*(ಪುಟ 3 ರಿಂದ ಮುಂದುವರಿದಿದೆ)*

ಅದರ ಬಗ್ಗೆ ಚಿಂತೆ ಇಲ್ಲ ಏಕೆಂದರೆ ಈ ಬದುಕು ಬಹಳ ಚಿಕ್ಕದು.[17] ನಾನು ಈ ಬೆಳಗ್ಗೆಯಷ್ಟೆ ಆರು ವರ್ಷದವನಾಗಿದ್ದವನಂತೆ ತೋರುತ್ತದೆ, ಮತ್ತು ಈಗ ನೋಡಿ ಸೆಪ್ಟೆಂಬರ್ 20, 2015ಕ್ಕೆ ಆಗಲೇ ಎಂಬತ್ತೊಂದು ವರ್ಷದವನಾಗಿದ್ದೇನೆ. ಆದರೆ ನಾವು ಪರಲೋಕ ಸೇರಿದಾಗ ಮತ್ತು ಅಲ್ಲಿ ನಾವು 10,000 ವರ್ಷ ಇದ್ದಾಗ, ನಾವು ಪ್ರಾರಂಭಿಸುತ್ತಿರುತ್ತೇವಷ್ಟೆ, ಏಕೆಂದರೆ ನಿರಂತರತೆಯು ದಶಲಕ್ಷಗಟ್ಟಲೆ ಅಷ್ಟೆ ಅಲ್ಲ, ಶತಕೋಟಿ ವರ್ಷಗಳಷ್ಟು ಆಗಿರುತ್ತದೆ. ಅದನ್ನು ತಪ್ಪಿಸಿಕೊಳ್ಳಬೇಡಿ. ನಿಮಗೋಸ್ಕರ, ನಿಮ್ಮ ಪ್ರೀತಿಪಾತ್ರರಿಗೋಸ್ಕರ, ಮತ್ತು ನಿಮ್ಮ ಜವಾಬ್ದಾರಿಯಾಗಿರುವವರಿಗೋಸ್ಕರ, ಕರ್ತನಲ್ಲಿ ಮುಂದುವರಿಯಿರಿ. ಜೀವ ನದಿಯನ್ನು, ಅಂದರೆ ಪ್ರಭು ಯೇಸುವನ್ನು, ಪವಿತ್ರಾತ್ಮನನ್ನು, ಪ್ರವೇಶಿಸಿ ಮತ್ತು ಶಾಶ್ವತವಾಗಿ ಅಲ್ಲಿ ಉಳಿಯಿರಿ. ನೀವು ರಕ್ಷಣೆ ಹೊಂದಿರದಿದ್ದರೆ, ದೇವರಿಗೆ ಈ ಪ್ರಾರ್ಥನೆಯನ್ನು ಸಲ್ಲಿಸಿ:

**ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[18] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬುತ್ತೇನೆ.[19] ಆತನು ಶಿಲುಬೆಯ ಮರಣ ಹೊಂದಿದನು ಮತ್ತು ನನ್ನ ಹಿಂದಿನ ಎಲ್ಲಾ ಪಾಪಗಳ ಕ್ಷಮಾಪಣೆಗಾಗಿ ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬುತ್ತೇನೆ.[20] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[21] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬುತ್ತೇನೆ.[22] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[23] ಕಾಲ್ವಾರಿಯ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿರಿ.[24] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು, ಏಕೆಂದರೆ ನಿಮ್ಮ ವಾಕ್ಯವಾದ ಬೈಬಲ್ ಹೀಗೆಂದು ಹೇಳುತ್ತದೆ.[25] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ವಾಕ್ಯ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[26] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[27] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಮತ್ತು ಇನ್ನು ಮೇಲೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[28]**

---

ರಕ್ಷಣೆಯ ನಂತರ, ಯೇಸುವು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ ದೀಕ್ಷಾಸ್ನಾನ ಪಡೆದರು.[29] ಬೈಬಲ್ ಸೊಸೈಟಿ ಆಫ್ ಇಂಡಿಯಾದ 'ಸತ್ಯವೇದವು" [ಇಂಗ್ಲಿಷ್ ನ ಕೆಜೆವಿ] ಬೈಬಲ್ ಅನ್ನು ಓದಿ, ಮತ್ತು ನಿಮ್ಮ ಪ್ರಯೋಜನಕ್ಕಾಗಿ ಹಾಗೂ ಇತರರ ಪ್ರಯೋಜನಕ್ಕಾಗಿ ಅದು ಹೇಳಿದ್ದನ್ನು ಮಾಡಿ.[30]

ಕ್ರಿಸ್ತರು ಮತ್ತು ದೇವರಾದ ತಂದೆ ಈಗ ಪವಿತ್ರಾತ್ಮರ ಮೂಲಕ ನಿಮ್ಮಲ್ಲಿ ನೆಲೆಗೊಂಡಿದ್ದಾರೆ. ದೇವರ ದೈವಿಕ ಸ್ವರೂಪದ ಪೂರ್ಣ ಪ್ರಮಾಣವನ್ನು ಹೊಂದಲು ನಿಮಗೊಂದು ದಾರಿಯಿದೆ. ದೇವರ ದೈವಿಕ ಸ್ವರೂಪವು ನಮ್ಮಲ್ಲಿ ಹೆಚ್ಚು ಹೆಚ್ಚು ನೆಲೆಗೊಂಡಂತೆಲ್ಲಾ ಸಹಸ್ರಾರು ಕ್ರೈಸ್ತರು ಸುಲಭವಾಗಿ ರಕ್ಷಣೆಯಿಂದ ವಿಮುಖರಾಗುವಂತೆ ಮಾಡಿದ ಶೋಧನೆಗಳ ವಿರುದ್ಧ ಹೋರಾಡಲು ನಿಮ್ಮನ್ನು ಹೆಚ್ಚು ಸಮರ್ಥರನ್ನಾಗಿ ಮಾಡುತ್ತದೆ. ಪವಿತ್ರಾತ್ಮದಿಂದ ದೀಕ್ಷಾಸ್ನಾನ ಪಡೆಯುವುದಕ್ಕಾಗಿ ಪ್ರಾರ್ಥಿಸಿ. ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೇಗೆ ಪಡೆಯುವುದು ಎಂಬ ಕುರಿತ ಸೂಚನೆಗಳನ್ನು ಮತ್ತು ದೇವರ ಪವಿತ್ರ ಸ್ವರೂಪವನ್ನು ಪಡೆಯಲು ನಮ್ಮ ಸಾಹಿತ್ಯಕ್ಕಾಗಿ ವಿಚಾರಿಸಿ ಅಥವಾ ಕರೆಮಾಡಿ. ಏಕೆಂದರೆ ಪವಿತ್ರತೆಯಿಲ್ಲದೆ, ಯಾವೊಬ್ಬನೂ ದೇವರನ್ನು ಕಾಣಲಾರನು (ಇಬ್ರಿಯರಿಗೆ 12:14)

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ. ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ ಯೇಸು ಆದೇಶಿಸುವಂತೆ ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೇವೆ ಎಂದು ಕೇಳುತ್ತೀರೋ? ದಶಾಂಶ, ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಾಂಶವನ್ನು [ದಶಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**17** 1 ಪೂರ್ವಕಾಲವೃತ್ತಾಂತ 29:15, ಯೋಬನು 4:17-21, 7:6-10, 9:25-26, 14:1-2, ಕೀರ್ತನೆಗಳು 22:29, 39:4-6, 90:10, ಯೆಶಾಯ 2:22, 40:6-7, ಯಾಕೋಬನು 1:10-11, 4:14, 1 ಪೇತ್ರನು 1:23-25 **18** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **19** ಮತ್ತಾಯ 26:63-64, 27:54, ಲೂಕ 1:30-33, ಯೋಹಾನ 9:35-37, ರೋಮಾಪುರದವರಿಗೆ 1:3-4 **20** ಅಪೊಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನ 1:7, ಪ್ರಕಟನೆ 5:9 **21** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನ 2:19, 21, 10:17-18, 11:25, ಅಪೊಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **22** ಲೂಕ 22:69, ಅಪೊಸ್ತಲರ ಕೃತ್ಯಗ ಳು 2:25-36, ಇಬ್ರಿಯರಿಗೆ 10:12-13 **23** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **24** ಎಫೆಸದವರಿಗೆ2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನ 1:7, ಪ್ರಕಟನೆ 1:5, 7:14 **25** ಮತ್ತಾಯ 26:28, ಅಪೊಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ 1:7, ಕೊಲೊಸ್ಸೆಯವರಿಗೆ 1:14 **26** ಮತ್ತಾಯ 21:22, ಯೋಹಾನ 6:35, 37-40, ರೋಮಾಪುರದವರಿಗೆ 10:13 **27** ಇಬ್ರಿಯರಿಗೆ 11:6 **28** ಯೋಹಾನ 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **29** ಮತ್ತಾಯ 28:18-20, ಯೋಹಾನ 3:5, ಅಪೊಸ್ತಲರ ಕೃತ್ಯಗಳು 2:38, 19:3-5 **30** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವ 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**

**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: +1 (661) 252-5686 • Fax +1 (661) 252-4362**

**www.alamoministries.com • taoffice@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ಸಂಜೆ 8 ಗಂಟೆಗೆ ಮತ್ತು ಇತರ ಸ್ಥಳಗಳಲ್ಲಿ ರಾತ್ರಿ ವೇಳೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗಿನ ಸಂಖ್ಯೆಗೆ ಕರೆ ಮಾಡಿ. (908) 937-5723.

333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.

*ಲಾಸ್ ಏಂಜಲಿಸ್ ಚರ್ಚ್ ಪ್ರದೇಶ:* 13136 *ಸಿಯೆರಾ ಹೈವೇ, ಸಾಂಟಾ ಕ್ಲಾರಿಟಾ, ಕ್ಯಾಲಿಫೋರ್ನಿಯಾ* 91390 (661) 251-9424 *ದಲ್ಲಿ ಪ್ರತಿ ಸಂಜೆ* 8 *ಗಂಟೆಗೆ ಮತ್ತು ಭಾನುವಾರದಂದು ಮಧ್ಯಾಹ್ನ* 3 *ಗಂಟೆಗೆ ಮತ್ತು ರಾತ್ರಿ* 8 *ಗಂಟೆಗೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು.*

*ಉಚಿತ ವಾಹನ ಸೇವೆಯನ್ನು ಹಾಲಿವುಡ್ ಬೂಲೆವಾರ್ಡ್ ಮತ್ತು ಹೈಲ್ಯಾಂಡ್ ಅವೆನ್ಯೂ, ಹಾಲಿವುಡ್, ಕ್ಯಾಲಿಫೋರ್ನಿಯಾದ ಮೂಲೆಯಿಂದ ಪ್ರತಿ ಸಂಜೆ* 6.30 *ಕ್ಕೆ, ಭಾನುವಾರಗಳಂದು ಮಧ್ಯಾಹ್ನ* 1.30 *ಕ್ಕೆ ಮತ್ತು ಸಂಜೆ* 6.30 *ಕ್ಕೆ ಒದಗಿಸಲಾಗುವುದು.*

*ಪ್ರತಿಯೊಂದು ಪ್ರಾರ್ಥನಾ ಸಭೆಯ ನಂತರ ಊಟದ ವ್ಯವಸ್ಥೆ ಮಾಡಲಾಗುವುದು.*

ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೊಸ್ತಲರ ಕೃತ್ಯಗಳು 4:12).

ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.

ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:

© Copyright October 2015 All rights reserved World Pastor Tony Alamo ® Registered October 2015

KANNADA—VOLUME 22200—*THE FEARFUL AND UNBELIEVING*